# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : 1448
**ಮಾನ್ಯ ಸದಸ್ಯರ ಹೆಸರು** : ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು)
**ಉತ್ತರಿಸಬೇಕಾದ ದಿನಾಂಕ** : 20-03-2025
**ಉತ್ತರಿಸುವ ಸಚಿವರು** : ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

*****

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಚೌಡಯ್ಯದಾನಪುರ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಕಾಯಕ ಕ್ಷೇತ್ರ ಹಾಗೂ ಐಕ್ಯ ಸ್ಥಳ ಇದು ತುಂಗಭದ್ರ ನದಿಯ ದಡದಲ್ಲಿರುವುದು ನಿಜವೆ; | ಹಾವೇರಿ ಜಿಲ್ಲೆಯ ಗುತ್ತಲದ ಹತ್ತಿರ ತುಂಗಭದ್ರಾ ನದಿಯ ತೀರದಲ್ಲಿ ಚೌಡದಾನಪುರದಲ್ಲಿ ಶ್ರೀ ಮುಕ್ತಿನಾಥೇಶ್ವರ ದೇವಾಲಯವು ರಾಷ್ಟ್ರೀಯ ಸಂರಕ್ಷಿತ ಸ್ಮಾರಕವಾಗಿದ್ದು, ಕೇಂದ್ರ ಸಂಸ್ಕೃತಿ ಮಂತ್ರಾಲಯದ ಅಧೀನದಲ್ಲಿರುವ ಭಾರತೀಯ ಪುರಾತತ್ವ ಸರ್ವೇಕ್ಷಣೆಯ ವ್ಯಾಪ್ತಿಯಲ್ಲಿರುತ್ತದೆ. ಈ ದೇವಾಲಯದ 15 ಮೀಟರ್ ದೂರದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಸಮಾಧಿಯಿದ್ದು, ಇದು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಪ್ರದೇಶವಾಗಿರುತ್ತದೆ. |
| ಆ) | ಅಂಬಿಗರ ಚೌಡಯ್ಯನವರ ಸಮಾಧಿಯ ಗದ್ದುಗೆಯನ್ನು ಕೂಡಲಸಂಗಮ ಬಸವಣ್ಣನವರ ಗದ್ದುಗೆಯನ್ನು ಕಟ್ಟಿದ ಮಾದರಿಯಲ್ಲಿ ಕಟ್ಟಡ ನಿರ್ಮಾಣ ಮಾಡಿ ಜನರಿಗೆ ಪ್ರದರ್ಶನ ಪಡೆಯಲು ಅನುಕೂಲ ಮಾಡುವ ಬಗ್ಗೆ ಸಾರ್ವಜನಿಕರಿಂದ ಒತ್ತಡ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಅಂಬಿಗರ ಚೌಡಯ್ಯನವರ ಸಮಾಧಿಯ ಗದ್ದುಗೆಯನ್ನು ಕೂಡಲಸಂಗಮ ಬಸವಣ್ಣನವರ ಗದ್ದುಗೆಯನ್ನು ಕಟ್ಟಿದ ಮಾದರಿಯಲ್ಲಿ ಕಟ್ಟಡ ನಿರ್ಮಾಣ ಮಾಡುವ ಪ್ರದೇಶವು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಆದ್ದರಿಂದ, ಸದರಿ ಇಲಾಖೆಯಿಂದ ಕೈಗೊಳ್ಳಬಹುದಾಗಿರುತ್ತದೆ. |
| ಇ) | ಈ ಪ್ರದೇಶ ಭಾರತೀಯ ಪುರಾತತ್ವ ಸರ್ವೇಕ್ಷಣೆಯ ವ್ಯಾಪ್ತಿಗೆ ಬರುತ್ತಿರುವುದು ಪುರಾತತ್ವ ಇಲಾಖೆಯ ಅನುಮತಿಯನ್ನು ಪಡೆಯಲು ಎಷ್ಟು ಬಾರಿ ಪತ್ರ ಬರೆಯಲಾಗಿದೆ; (ಮಾಹಿತಿ ಒದಗಿಸುವುದು) | ಸದರಿ ತಾಣವನ್ನು ಕೂಡಲ ಸಂಗಮ ಮಾದರಿಯಲ್ಲಿ ರಕ್ಷಣೆ ಮತ್ತು ಅಭಿವೃದ್ಧಿಪಡಿಸುವಂತೆ ದಿನಾಂಕ:23/12/2024ರ ಪತ್ರದಲ್ಲಿ ಪುರಾತತ್ವ ಅಧೀಕ್ಷಕರು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ಧಾರವಾಡ ವೃತ್ತ, ಧಾರವಾಡರವರನ್ನು ಕೋರಲಾಗಿರುತ್ತದೆ.<br><br>ಪುರಾತತ್ವ ಅಧೀಕ್ಷಕರು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ಧಾರವಾಡ ವೃತ್ತ, ಧಾರವಾಡರವರು ದಿನಾಂಕ:24/01/2025ರ ಪತ್ರದಲ್ಲಿ ಸದರಿ ಪ್ರದೇಶವನ್ನು ಅಭಿವೃದ್ಧಿಪಡಿಸಲು AMASR Act 1958 (Amendment and Validation Act 2010) ಮತ್ತು ಅದರ ನಿಯಮ 1959ರ ಪ್ರಕಾರ ಸಕ್ಷಮ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರ ಪಡೆಯದ ಹೊರತು ಯಾವುದೇ ಅಗೆಯುವಿಕೆ/ದುರಸ್ತಿ/ನವೀಕರಣ/ನಿರ್ಮಾಣ ಕಾರ್ಯಗಳನ್ನು ರಕ್ಷಿಸಲ್ಪಟ್ಟಿರುವ ಸ್ಮಾರಕದ 100 ಮೀಟರ್‌ಗಳ ಪ್ರದೇಶ ಮಿತಿ ಮತ್ತು ನಿಯಂತ್ರಿತ ಪ್ರದೇಶದ 300 ಮೀಟರ್ ಒಳಗೆ ಕೈಗೊಳ್ಳುವುದು ಅಕ್ರಮ ಮತ್ತು ಶಿಕ್ಷಾರ್ಹ ಅಪರಾಧವೆಂದು ತಿಳಿಸಿ, ಈ ನಿಷೇದಿತ/ನಿಯಂತ್ರಿತ ಪ್ರದೇಶದಲ್ಲಿ ಅಗೆಯುವಿಕೆ/ದುರಸ್ತಿ/ನವೀಕರಣ/ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳುವ ಮೊದಲು ನಿರಕ್ಷೇಪಣಾ ಪತ್ರ(NOC) ಪಡೆಯಲು ಸೂಚಿಸಿರುತ್ತಾರೆ. ನಿರಕ್ಷೇಪಣಾ ಪತ್ರ(NOC) ದೊರೆತಲ್ಲಿ ಅನುದಾನದ ಲಭ್ಯತೆಗನುಗುಣವಾಗಿ ಪರಿಶೀಲಿಸಲಾಗುವುದು. |

| | | |
|---|---|---|
| ಈ) | ಇದುವರವಿಗೆ ಕೇಂದ್ರದ ಮೇಲೆ ಒತ್ತಡ ತರುವ ಪ್ರಯತ್ನ ಸರ್ಕಾರ ಮಾಡದೇ ಇದ್ದ ಪಕ್ಷದಲ್ಲಿ ಕೇಂದ್ರ ಸಂಸ್ಕೃತಿ ಮಂತ್ರಾಲಯದ ಅಧೀನದಲ್ಲಿರುವ ಭಾರತೀಯ ಪುರಾತತ್ವ ಸರ್ವೇಕ್ಷಣೆ ಇಲಾಖೆಗೆ ಅಧಿಕಾರಿಗಳಿಗೆ ಖುದ್ದು ಭೇಟಿ ಮಾಡುವ ಮೂಲಕ ಅಥವಾ ನಿಯೋಗವೊಂದನ್ನು ತೆಗೆದುಕೊಂಡು ಹೋಗುವ ಮೂಲಕ ಒತ್ತಡ ತಂದು ಅನುಮತಿ ಪಡೆದು ಅಂಬಿಗರ ಚೌಡಯ್ಯನವರ ಸಮಾಧಿ ಗದ್ದುಗೆ ನಿರ್ಮಾಣ ಮಾಡಲು ಕ್ರಮವಹಿಸಲಾಗುವುದೇ? | ಈ ಬಗ್ಗೆ ಭಾರತೀಯ ಪುರಾತತ್ವ ಸರ್ವೇಕ್ಷಣೆ ಇಲಾಖೆ ಮತ್ತು ಜಿಲ್ಲಾಡಳಿತದೊಂದಿಗೆ ಸಮಾಲೋಚನೆ ಹಾಗೂ ಸಮನ್ವಯ ಸಾಧಿಸಿ, ಸದರಿ ಸಮಾಧಿ / ಗದ್ದುಗೆ ನಿರ್ಮಾಣ ಮಾಡುವ ಬಗ್ಗೆ ಪರಿಶೀಲಿಸಲಾಗುವುದು. |

**ಸಂಖ್ಯೆ: TOR 106 TDV 2025**

**(ಎಚ್.ಕೆ.ಪಾಟೀಲ)**
ಕಾನೂನು, ನ್ಯಾಯ, ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು.